## ಔಷಧಿ ಮಳಿಗೆ ಸ್ಥಾಪನೆ

**545(1070); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)**

ಅ) ಔಷಧಿ ಮಳಿಗೆ ಸ್ಥಾಪನೆ ಯೋಜನೆಯ ಮೂಲಕ ಸಾರ್ವಜನಿಕರು ಕಡಿಮೆ ಬೆಲೆಯಲ್ಲಿ ಔಷಧಿಗಳನ್ನು ಪಡೆದುಕೊಳ್ಳುವ ಯೋಜನೆಯ ಅನುಷ್ಠಾನ ಯಾವ ಹಂತದಲ್ಲಿದೆ;

ಆ) ಸದರಿ ಯೋಜನೆಗೆ ಕೇಂದ್ರ ಸರ್ಕಾರದವರು ನೀಡುವ ಆರ್ಥಿಕ ನೆರವು ಇತ್ಯಾದಿಗಳ ವಿವರಗಳೇನು; ಇದುವರೆಗೂ ಪಡೆದ ನೆರವಿನ ಮೊತ್ತ ಮುಂತಾದ ವಿವರಗಳೇನು;

ಇ) ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಪ್ರಸ್ತುತ ಔಷಧಿ ಸರಬರಾಜು ವ್ಯವಸ್ಥೆಯ ಕುರಿತಾದ ವಿವರಗಳೇನು;

**ಶ್ರೀ ಯು.ಟಿ. ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

ಅ) ಈಗಾಗಲೇ ರಾಜ್ಯದ ಎಲ್ಲಾ ಹಂತದ ಆಸ್ಪತ್ರೆಗಳಿಗೂ ಉಚಿತವಾಗಿ ಅನುದಾನ ಅವಲಂಬಿತ ಔಷಧಿ ಪೂರೈಕೆ ವ್ಯವಸ್ಥೆಯನ್ನು ಕೆ.ಎಸ್.ಡಿ.ಎಲ್.ಡಬ್ಲ್ಯು. ಸಂಸ್ಥೆಯ ಮೂಲಕ ನಿರ್ವಹಿಸುತ್ತಿದ್ದು, 2015–16ನೇ ಸಾಲಿನಿಂದ ಎಲ್ಲಾ ಆಸ್ಪತ್ರೆಗಳ ಬೇಡಿಕೆಗೆ ಅನುಗುಣವಾಗಿ ಅವಶ್ಯಕ ಔಷಧಿಯನ್ನು ಪೂರೈಸುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಇದರ ಜೊತೆಗೆ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ 39 ಸರ್ಕಾರಿ ಆಸ್ಪತ್ರೆಗಳಲ್ಲಿ ಜನಸಂಜೀವಿನಿ ಎಂಬ ಜನರಿಕ್ ಮಳಿಗೆಗಳನ್ನು ಸ್ಥಾಪಿಸುವ ಕಾರ್ಯಕ್ರಮವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಕೇಂದ್ರ ಸರ್ಕಾರದಿಂದ ಸದರಿ ಯೋಜನೆಗೆ ಕೆಳಕಂಡಂತೆ ಆರ್ಥಿಕ ನೆರವು ನೀಡಿರುವ ಮೊತ್ತದ ವಿವರ ಈ ಕೆಳಕಂಡಂತಿದೆ.

ಪೀಠೋಪಕರಣಗಳಿಗೆ 1 ಲಕ್ಷ, ಔಷಧಿಗಳಿಗೆ 1 ಲಕ್ಷ ಹಾಗೂ ಗಣಕಯಂತ್ರ ಖರೀದಿಗೆ 50 ಸಾವಿರ ಆರ್ಥಿಕ ನೆರವು ನೀಡಲಾಗುತ್ತಿದೆ.

ಇ) ಹಾಲಿ ಜಾರಿಯಲ್ಲಿರುವ ವ್ಯವಸ್ಥೆಯಂತೆ, ರಾಜ್ಯದ ವಿವಿಧ ಹಂತದ ಆರೋಗ್ಯ ಸಂಸ್ಥೆಗಳಿಂದ ಅವರವರ ಬೇಡಿಕೆಗನುಗುಣವಾಗಿ ಸದ್ಯದಲ್ಲಿ ವಾರ್ಷಿಕ ಬೇಡಿಕೆ ಪಟ್ಟಿಯನ್ನು ಪಡೆಯಲಾಗುತ್ತದೆ. ಜಿಲ್ಲಾವಾರು ಬಂದ ಬೇಡಿಕೆಯನ್ನು ಕ್ರೋಢೀಕರಿಸಿ ರಾಜ್ಯಮಟ್ಟದ ಉನ್ನತ ಸಮಿತಿಗಳಾದ ಸ್ಟೇಟ್ ಥೆರಪಿಟಿಕ್ ಕಮಿಟಿ ಮತ್ತು ನೀಡ್‌ಅಸೆಸ್‌ಮೆಂಟ್ ಕಮಿಟಿಗಳ ಮುಂದೆ ಮಂಡಿಸಿ ಶಿಫಾರಸ್ಸು ಮಾಡಲ್ಪಟ್ಟ ಔಷಧಗಳು ಹಾಗೂ ಅವುಗಳ ಪ್ರಮಾಣಕ್ಕನುಗುಣವಾಗಿ ಟೆಂಡರ್ ಕರೆದು ಸರಬರಾಜುದಾರರಿಂದ ಖರೀದಿಸಿ ಜಿಲ್ಲಾ ಔಷಧ ಉಗ್ರಾಣಗಳ ಮೂಲಕ ಹಂತಹಂತವಾಗಿ ಔಷಧಿಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ಸರಬರಾಜು ಮಾಡಲಾಗುತ್ತಿದೆ.

**ಹಿಂದುಳಿದ ವರ್ಗಗಳ ಆಯೋಗದ ಸಮಾಜ ಮುಖಿ ಯೋಜನೆ**

**546(1071); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)**

ಅ) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದವರು ನಡೆಸಿದ ಸಮಗ್ರ ಜಾತಿ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ಪ್ರಗತಿಯ ವಿವರಗಳೇನು;

ಆ) ಆಯೋಗದವರು ಸದರಿ ಜಾತಿ ಜನಗಣತಿಯ ಸಮಗ್ರ ವಿವರಗಳನ್ನು ನೀಡಲು ಗೊತ್ತುಪಡಿಸಿರುವ ಕಾಲಮಿತಿ ಯಾವುದು; ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ಎಷ್ಟು ಪ್ರದೇಶಗಳಲ್ಲಿ ಗಣತಿ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆದಿಲ್ಲವೆಂಬ ದೂರುಗಳು ಬಂದಿವೆ; ಆ ಕುರಿತು ಕೈಗೊಂಡ ಕ್ರಮಗಳೇನು;